ಮುಂಜಾವು
ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly, KOPPA-CHM. ಫೋನ್ : 114
8ನೇ ವರ್ಷ 43ನೇ ಸಂಚಿಕೆ ಕೊಪ್ಪ 24-6-1990 ಭಾನುವಾರ ಬೆಲೆ 60 ಪೈಸೆ

ಕೊಪ್ಪ ಮಂಡಲ ಪ್ರಧಾನರಾಗಿ ವಿವೇಕ್

ಕೊಪ್ಪ : ಇಲ್ಲಿನ ಪರಿವರ್ತಿತ ಮಂಡಲ ಪಂಚಾಯ್ತಿ ಪ್ರಧಾನರಾಗಿ ಕಾಂಗ್ರೆಸ್‌ನ ಪಿ. ಬಿ. ವಿವೇಕ್ ಜೂನ್ 19 ರಂದು ಆಯ್ಕೆಯಾದರು. ಟಿ. ಪಿ. ಭಾಗೀರಥಿ ಉಪ ಪ್ರಧಾನರಾದರು.

ಪ್ರಧಾನ ಪದವಿಗೆ ತೀವ್ರ ಪ್ರತಿ ಸ್ಪರ್ಧೆ ಒಡ್ಡಿ, ಶಾಸಕರಿಂದಲೂ ಬೆಂಬಲ ಪಡೆದಿದ್ದ ಮಹಮ್ಮದ್ ಸಾದಿಕ್ ಅಂತಿಮವಾಗಿ ಈ ಹುದ್ದೆಯನ್ನು ಎರಡೂವರೆ ವರ್ಷಗಳ ಎರಡನೇ ಅವಧಿಗೆ ಹಂಚಿಕೊಳ್ಳಲು ಒಪ್ಪಿಕೊಂಡು, ಮೊದಲ ಎರಡೂವರೆ ವರ್ಷವನ್ನು ವಿವೇಕ್‌ಗೆ ಬಿಟ್ಟು ಕೊಡಲು ಒಪ್ಪಿದ್ದರಿಂದ ಬಿಕ್ಕಟ್ಟು ಬಗೆಹರಿಯಿತು. ಕೇವಲ 3 ದಿನ ಮೊದಲು ನ. ರಾ. ಪುರ ಮಂಡಲದಲ್ಲಿ ಕಾಂಗ್ರೆಸ್ಸೊಳಗಿನ ಕಿತ್ತಾಟದಿಂದ ಜನತಾ ದಳದ ಪ್ರಧಾನರು ಆಯ್ಕೆಯಾದುದು ಇಲ್ಲಿ ಬಿಕ್ಕಟ್ಟು ಬಗೆಹರಿಸಲು ನೆರವಾಯಿತೆನ್ನಲಾಗಿದೆ.

ಉಪ ಪ್ರಧಾನ ಹುದ್ದೆಯನ್ನು 2ನೇ ಅವಧಿಗೆ ಗೋಪಿ ವಹಿಸಿಕೊಳ್ಳಲಿದ್ದಾರೆ.

ಹಿರಿಯ ನ್ಯಾಯಾಧೀಶರಿಂದ ಕಟ್ಟಡಗಳ ಪರಿಶೀಲನೆ

ಕೋರ್ಟ್ ಕಡೆಗೆ ಕೊಪ್ಪದ ಮತ್ತೊಂದು ಹೆಜ್ಜೆ

ಕೊಪ್ಪ : ಜಿಲ್ಲಾ ಮತ್ತು ಸೆಶನ್ಸ್ ನ್ಯಾಯಾಧೀಶರಾದ ಬಿ. ಕೆ. ಸಂಗಳದ್ ಮತ್ತು ಜಿಲ್ಲಾ ಕಾರ್ಮಿಕ ನ್ಯಾಯಾಧೀಶರಾದ ಮಹದೇವಪ್ಪ ಇವರುಗಳು ಜೂನ್ 19 ರಂದು ನ್ಯಾಯಾಲಯ ಮತ್ತು ನ್ಯಾಯಾಧೀಶರ ವಸತಿಗಾಗಿ ಶಿಫಾರ್ಸು ಮಾಡಲಾಗಿರುವ ಕಟ್ಟಡಗಳನ್ನು ಪರಿಶೀಲಿಸಿದರು. ಇದರೊಂದಿಗೆ, ಕೊಪ್ಪವು ಕೋರ್ಟ್ ಹೊಂದುವತ್ತ ಮತ್ತೊಂದು ಖಚಿತ ಹೆಜ್ಜೆ ಇಟ್ಟಂತಾಯಿತು.

ನ್ಯಾಯಾಧೀಶರುಗಳೊಂದಿಗೆ ಯು. ಕೆ. ಶಾಮಣ್ಣ, ಬಿ. ಜಿ. ಚಿದಂಬರ್, ಪಟ್ಟಣದ ವಕೀಲರು, ಹಲವು ಮಂದಿ ಮಂಡಲ ಪ್ರಧಾನರು, ಸದಸ್ಯರು, ಗಣ್ಯರು ಮತ್ತು ಮುಖಂಡರು, ತಹಸೀಲ್ದಾರ್ ಮತ್ತು ಇತರ ಅಧಿಕಾರಿಗಳು ಹಾಗೂ ಪತ್ರಕರ್ತರು ಈ ಸಂದರ್ಭದಲ್ಲಿ ಹಾಜರಿದ್ದರು.

ನ್ಯಾಯಾಲಯಕ್ಕಾಗಿ ಹಳೆ ಆಸ್ಪತ್ರೆ ಸಮುಚ್ಚಯ ಹಾಗೂ ಹಿಂದಿನ ಡಿಎಫ್‌ಒ ಕಛೇರಿಯ ಕಟ್ಟಡಗಳನ್ನು ಪರಿಶೀಲಿಸಿ, ಸರ್ಕಾರಕ್ಕೆ (ಜಿ. ಪ. ಗೆ) ಸೇರಿದ ಆಸ್ಪತ್ರೆ ಕಟ್ಟಡವನ್ನು ಹಲವು ಮಾರ್ಪಾಡುಗಳೊಂದಿಗೆ ಆಯ್ಕೆ ಮಾಡಿದ ನ್ಯಾಯಾಧೀಶರುಗಳು, ಬರಲಿರುವ ನ್ಯಾಯಾಧೀಶರ ನಿವಾಸಕ್ಕಾಗಿ ಬಿಡಿಓ ನಿವಾಸದ ಬಲಗಡೆಯ ಕಟ್ಟಡವನ್ನು ಆಯ್ಕೆ ಮಾಡಿ, ಅದನ್ನು 'ಅಧಿಕೃತ ನಿವಾಸ'ವನ್ನಾಗಿ (ಡೆಸಿಗ್ನೇಟೆಡ್ ಕ್ವಾರ್ಟರ್ಸ್) ನಿಗದಿ ಪಡಿಸಲು ಸೂಚಿಸಿದರು.

ಅನಂತರ ತಹಸೀಲ್ದಾರ್ ಸಭಾಂಗಣದಲ್ಲಿ ಅತಿಥಿಗಳ ಗೌರವಾರ್ಥ ನಡೆದ ಚಹಾ ಕೂಟದಲ್ಲಿ ಮಾತನಾಡಿದ ಸಂಗಳದ್‌ರವರು, ನ್ಯಾಯ ಎಲ್ಲರಿಗೂ, ದುಬಾರಿಯಾಗದೆಯೇ ಸಿಗಬೇಕು; ನ್ಯಾಯ ವಿಳಂಬವಾದರೆ ಜನತೆಗೆ ನ್ಯಾಯಾಲಯಗಳ ಬಗ್ಗೆಯೇ ವಿಶ್ವಾಸ ಹೊರಟು ಹೋಗುತ್ತದೆ ಎಂದು ತಿಳಿಸಿ, 'ನ್ಯಾಯವನ್ನು ದೊರಕಿಸಿ ಕೊಟ್ಟರೆ ಮಾತ್ರ ಸಾಲದು. ನ್ಯಾಯ ದಾನ ಮಾಡಿದ್ದೆಂಬುದು ಮೇಲ್ನೋಟಕ್ಕೆ ಕಾಣುವಂತೆಯೂ ಇರಬೇಕು' ಎಂಬ ನಾಣ್ಣುಡಿಯನ್ನು ಉದಹರಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಶಾಮಣ್ಣ ಮಾತನಾಡಿ, ತನ್ನ ಕ್ಷೇತ್ರದಲ್ಲಿ ಶೃಂಗೇರಿ, ಕೊಪ್ಪ ಈ 2 ತಾ॥ಗಳಿಗೆ ಉಪಯುಕ್ತವಾಗುವ ಈ ಕೋರ್ಟ್‌ಗಾಗಿ ಶ್ರಮಿಸಿದರೆ ನ.ರಾ. ಪುರ ತಾ॥ನವರ ವಿರೋಧಕ್ಕೆ ಕಾರಣವಾಗುತ್ತೆ. ಆದರೂ ಜನರಿಗೆ ಹಿತವಾಗುವ ದೃಷ್ಟಿಯಿಂದ ಈ ಕೋರ್ಟ್ ಸ್ಥಾಪನೆಗೆ ಎಲ್ಲ ರೀತಿಯಿಂದಲೂ ಶ್ರಮಿಸುವುದಾಗಿ ತಿಳಿಸಿದರು.

ಸ್ವಾಗತ ಮತ್ತು ಪ್ರಾಸ್ತಾವಿಕ ಭಾಷಣ ಮಾಡಿದ ವಕೀಲ ಎಚ್. ಡಿ. ನಾಯಕ್, ಕೊಪ್ಪ, ಶೃಂಗೇರಿ ತಾಲ್ಲೂಕುಗಳ ಮೂಲೆ ಮೂಲೆಯ ಜನ ನ್ಯಾಯಾಲಯಕ್ಕೆ ಹೋಗಲು ಪಡಬೇಕಾಗಿರುವ ಬವಣೆಯನ್ನು ವಿವರಿಸಿದರು. ವಕೀಲ ವಿ. ಆರ್. ನಟಶೇಖರ್ ವಂದಿಸಿದರು.

ನಾರ್ವೆ ಮಂಡಲ : ಶೇ. 18ರ ನಿಧಿಯಿಂದ ಶಾಲಾ ಮಕ್ಕಳಿಗೆ ಪುಸ್ತಕ ನೀಡಲು ನಿರ್ಧಾರ

ನಾರ್ವೆ : ಇಲ್ಲಿನ ನರಸೀಪುರ ಮಂಡಲ ಪಂಚಾಯ್ತಿಯು ತನ್ನ ಶೇ. 18 ರ ಹಣದಲ್ಲಿ ಹರಿಜನ/ಗಿರಿಜನ ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ಒದಗಿಸಲು ನಿರ್ಣಯಿಸಿರುವುದಾಗಿ ಮಂಡಲ ಪ್ರಧಾನ ಕಾಡಪ್ಪ ಗೌಡ ತಿಳಿಸಿದ್ದಾರೆ.

ಹರಂದೂರು ಮಂಡಲವೂ ಇದನ್ನನುಸರಿಸುವ ನಿರೀಕ್ಷೆ ಇದೆಯೆಂದು ಸದಸ್ಯ ಎಸ್. ಪಿ. ಚಂದ್ರಶೇಖರ್ ತಿಳಿಸಿದ್ದಾರೆ.

ಶೃಂಗೇರಿ ಮಂ। ಪ್ರಧಾನರಾಗಿ ಎಚ್.ಆರ್. ಕೃಷ್ಣಮೂರ್ತಿ; ಉಪ ಪ್ರಧಾನರಾಗಿ ರವಿ

(ವರದಿ ಕಲ್ಕುಳಿ ವಿಠಲ ಹೆಗ್ಡೆ)

ನಾಮಕರಣ ಸದಸ್ಯರು ಸೇರಿ 6 ಸದಸ್ಯರ ಬಲ ಹೊಂದಿದ್ದ ಕಾಂಗ್ರೆಸ್ಸಿನಲ್ಲಿ ಎಚ್. ಆರ್. ಕೃಷ್ಣಮೂರ್ತಿ ಆಯ್ಕೆ ಖಚಿತವಾಗಿದ್ದು, ಪಕ್ಷೇತರ ಸದಸ್ಯ ಬಿ. ಕೆ. ರವಿಯವರ ಬಲದೊಂದಿಗೆ ಪ್ರಧಾನರ ಆಯ್ಕೆ ಅವಿರೋಧವಾಯಿತು. ರವಿ ಉಪ ಪ್ರಧಾನರಾಗಿ ಆಯ್ಕೆಯಾದರು.

ರವಿಯಲ್ಲದೆ ಇನ್ನೊಬ್ಬ ಪಕ್ಷೇತರರು, 3 ಬಿ.ಜೆ.ಪಿ. ಮತ್ತು ಒಂದು ಜನತಾ ದಳ- ಒಟ್ಟು 12 ಸದಸ್ಯರನ್ನು ಹೊಂದಿರುವ ಶೃಂಗೇರಿ ಮಂಡಲದಲ್ಲಿ ಈ ಇಬ್ಬರು ಯುವಕರೂ ರಾಜಕೀಯದ ಹೊಸ ಮುಖಗಳಾಗಿದ್ದು, ಪಟ್ಟಣದ ಅಭಿವೃದ್ಧಿಗೆ ಶಕ್ತಿ ಮೀರಿ ಶ್ರಮಿಸುವುದಾಗಿ ತಿಳಿಸಿ, ಸಾರ್ವಜನಿಕರ ಸಹಕಾರ ಕೋರಿದ್ದಾರೆ.

ಶೃಂಗೇರಿಯಲ್ಲಿ ಅಂತರ್ಜಾತಿ ಸರಳ ವಿವಾಹಗಳು

ಶೃಂಗೇರಿ : ನ. ರಾ. ಪುರ ತಾಲ್ಲೂಕು ಅನ್ನೂರಿನವರಾದ ಕೃಷ್ಣೇಗೌಡರ ಮಗ ಶಿವಪ್ಪಗೌಡ ಮತ್ತು ಭದ್ರಪ್ಪ ಶೆಟ್ಟರ ಮಗಳು ಜಯಲಕ್ಷ್ಮಿ ಇವರ ವಿವಾಹವು ಜೂನ್ 20ರಂದು ಶೃಂಗೇರಿಯ ಅಂತರಜಾತಿ ಮತ್ತು ಸರಳ ವಿವಾಹಿತರ ವೇದಿಕೆ ಆಶ್ರಯದಲ್ಲಿ ಸರಳವಾಗಿ ನೆರವೇರಿತು. ಕಲ್ಕುಳಿ ವಿಠಲಹೆಗ್ಡೆ ಕಾರ್ಯಕ್ರಮದ ನಿರ್ವಹಣೆ ವಹಿಸಿದ್ದರು.

ಪದ್ಮನಾಭ ಶೆಟ್ಟರ ಮಗ ದಿನೇಶ ಮತ್ತು ನರಸಿಂಹ ಅವರ ಮಗಳು ಶಾಂತಾ ಅವರ ವಿವಾಹ ಜೂನ್ 21ರಂದು ನಡೆಯಿತು. ಕಾನೂನಿನ ತೊಡಕಿನಿಂದ ಸ್ವಲ್ಪ ಗೊಂದಲವುಂಟಾಗಿ ಮದುವೆ ಠಾಣೆಯಲ್ಲಿ ನಡೆಯಲಿಲ್ಲ. ಸಾರ್ವಜನಿಕರು ಮತ್ತು ವಿವಿಧ ಸಂಘ ಸಂಸ್ಥೆಗಳ ಸದಸ್ಯರು ಸುಮಾರು 100ಕ್ಕೂ ಹೆಚ್ಚು ಜನ ಠಾಣೆಯ ಬಳಿ ಸೇರಿದ್ದರು. ಕೊನೆಗೆ ಸಾರ್ವಜನಿಕರದೇ ನೇತೃತ್ವದಲ್ಲಿ ಮ[illegible]ರ್ಜುನ ದೇವಸ್ಥಾನದಲ್ಲಿ ವಧೂವರರು ಪರಸ್ಪರ ಹೂಮಾಲೆ ವಿನಿಮಯ ಮತ್ತು ಫೋಟೋಗಳೊಂದಿಗೆ ನಡೆಯಿತು.

ಈ ಮದುವೆಗೆ ವರನ ಪೋಷಕರಿಂದ ತೀವ್ರ ವಿರೋಧವಿತ್ತು.

ಹಸುಳೆಗಳೊಂದಿಗೆ ತಾಯಿಯ ಆತ್ಮಹತ್ಯೆ

ಉತ್ತಮೇಶ್ವರ : ಇಲ್ಲಿನ ಇಂದಿರಾನಗರ ವಾಸಿ, ಅಡಿಗೆ ವೃತ್ತಿಯ ಟಿ.ಎಸ್. ಚಂದ್ರಶೇಖರ ಎಂಬವರ ಪತ್ನಿ ಚಂದ್ರಮತಿ (28) ಎಂಬ ಗೃಹಿಣಿ ಜೂನ್ 15 ರಂದು ಸಮೀಪದ ಸೀತಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

17 ರಂದು ಆಕೆಯ ಶವ ದೊರೆತಿದ್ದು, ಕಾಣೆಯಾಗಿರುವ ಆಕೆಯ ಹೆಣ್ಣು ಮಕ್ಕಳಾದ ಪದ್ಮಾವತಿ (7) ಮತ್ತು ಪುಷ್ಪಾ (4) ಇವರ ಸುಳಿವು ಸಿಕ್ಕಿಲ್ಲ ಅಥವಾ ಶವಗಳಾದರೂ ಪತ್ತೆಯಾಗಿಲ್ಲ. ಚಂದ್ರಶೇಖರ 16 ರಂದು ಕೊಪ್ಪ ಠಾಣೆಗೆ ನೀಡಿದ ದೂರಿನಲ್ಲಿ, ಅಡಿಗೆ ಕೆಲಸಕ್ಕೆ 12 ರಂದು ಹೋಗಿದ್ದ ತಾನು 15 ರಂದು ವಾಪಸು ಮನೆಗೆ ಬಂದಾಗ ಹೆಂಡತಿ ಮಕ್ಕಳು ಕಾಣೆಯಾಗಿದ್ದಾರೆಂದು ತಿಳಿಸಿದ್ದರು.

ಚಂದ್ರಮತಿಯವರ ಈ ದುರಂತ ಮರಣಕ್ಕೆ ಕಾರಣ ಸ್ಪಷ್ಟವಾಗಿಲ್ಲ. "ಆಕೆಗೆ ಸ್ವಲ್ಪ ತಲೆ ಸರಿಯಿರಲಿಲ್ಲ" ಎಂದು ಆಕೆಯ ತಂದೆ ಮತ್ತು ತಂಗಿ-ಇವರುಗಳೇ ಪೋಲೀಸರಿಗೆ ತಿಳಿಸಿದ್ದಾರೆನ್ನಲಾಗಿದೆ. ಆದರೆ ಆಕೆ ತನ್ನೊಂದಿಗೆ ಮಕ್ಕಳನ್ನೂ ಒಯ್ದಿರುವುದು ಬಹುತೇಕ ಖಚಿತವೆನ್ನಿಸಿದ್ದು, ತಲೆ ಸರಿಯಿಲ್ಲದವರು ಹೀಗೆ ಮಾಡುವ ಸಂಭವವಿಲ್ಲದಿರುವುದರಿಂದ, ಆತ್ಮಹತ್ಯೆಗೆ ನಿಜವಾದ ಕಾರಣವೇನು-ಎಂಬುದು ಪತ್ತೆಯಾಗಿಲ್ಲ. ಪೋಲೀಸರು 'ಅಸ್ವಾಭಾವಿಕ ಮರಣ'ವೆಂದು ದಾಖಲಿಸಿದ್ದಾರೆ.

ಸಸಿ ಮಡಿ ತಯಾರಿ ಪ್ರಾಯೋಗಿಕ ತರಬೇತಿ

ಮೂಡಿಗೆರೆಯ ಕೃಷಿ ವಿಜ್ಞಾನ ಕೇಂದ್ರ ಮತ್ತು ಕೃಷಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಭತ್ತದ ಸಸಿ ಮಡಿ ತಯಾರಿಯ ಪ್ರಾಯೋಗಿಕ ತರಬೇತಿ ಕಾರ್ಯಕ್ರಮ ಕೊಪ್ಪದ ಬಳಿಯ ಮಂಜ್ರವಳ್ಳಿ ಮತ್ತು ಶೃಂಗೇರಿಯ ಉಳವಳ್ಳಿಯಲ್ಲಿ ಈಚೆಗೆ ನಡೆಯಿತು. ಕೇಂದ್ರದ ತರಬೇತಿ ಸಂಘಟಕ ಡಾ॥ ನಾಗರಾಜ್ ಮತ್ತು ತರಬೇತಿ ಸಹಾಯಕ ಪೆನ್ನೋಬಳಿ ಸ್ವಾಮಿ ಹಾಗೂ ಕೃಷಿ ಇಲಾಖೆ ಅಧಿಕಾರಿಗಳು ತರಬೇತಿ, ಮಾಹಿತಿ ನೀಡಿದರು.

ಕೃಷಿ ಸಾಮಗ್ರಿ ಪಡೆದುಕೊಳ್ಳಲು ಸೂಚನೆ

1989-90ರ ಮುಂಗಾರು ಬೆಳೆ ನೆರೆ ಹಾವಳಿಗೀಡಾಗಿ ನಷ್ಟ ಹೊಂದಿದ್ದ ಶೃಂಗೇರಿ ತಾಲ್ಲೂಕಿನ ಸಣ್ಣ - ಅತಿ ಸಣ್ಣ ರೈತರಿಗೆ ಕೊಡಮಾಡಲಾಗಿರುವ ಕೃಷಿ ಸಾಮಗ್ರಿಗಳಾದ ಬಿತ್ತನೆ ಬೀಜ, ರಸ ಗೊಬ್ಬರ ಮತ್ತು ಸಸ್ಯಸಂರಕ್ಷಣೆ ಔಷಧಿಗಳನ್ನು ಇನ್ನೂ ತೆಗೆದುಕೊಂಡು ಹೋಗಿಲ್ಲದ ರೈತರು ಕೂಡಲೇ ತೆಗೆದುಕೊಂಡು ಹೋಗಬೇಕೆಂದು ಶೃಂಗೇರಿ ತಾ॥ ಸಹಾಯಕ ಕೃಷಿ ನಿರ್ದೇಶಕರು ಕೋರಿದ್ದಾರೆ.

ಮಳೆಗೆ ಸಿಕ್ಕ ಭತ್ತದ ರಕ್ಷಣೆಗೆ ಉಪಾಯ

ಕೊಪ್ಪ : ಮೇ 20ರಿಂದ ಬೀಳುತ್ತಿರುವ ಮಳೆಗೆ ಸಿಕ್ಕಿ ಒದ್ದೆಯಾಗಿರುವ 2ನೇ ಬೆಳೆ ಭತ್ತವನ್ನು 25 ಕಿಲೋ ಭತ್ತದ ಪದರಿಗೆ 1 ಕಿಲೋದಂತೆ ಉಪ್ಪು ಬೆರೆಸಿ ಇಟ್ಟರೆ 2-3 ದಿನ ಬೂಸ್ಟು, ಮೊಳಕೆ ಬರದಂತೆ ತಡೆಯಬಹುದು. ಅನಂತರ ಆಗಾಗ್ಗೆ ಬರುವ ಬಿಸಿಲಿನಲ್ಲಿ ಈ ಭತ್ತ ಒಣಗಿಸಿ ಬಳಸಬಹುದು ಎಂದು ಸ॥ ಕೃಷಿ ನಿರ್ದೇಶಕ ಶ್ರೀನಿವಾಸಯ್ಯ ತಿಳಿಸಿದ್ದಾರೆ.

ಅಲ್ಲದೆ, ಸಾಧ್ಯವಾದ ಮಟ್ಟಿಗೆ ಭತ್ತ ಕಟಾವಾದ ತಕ್ಷಣ ಮನೆಯಲ್ಲಿ [illegible] ಬೇಕು ಅಥವಾ ಈಗಾಗಲೇ ಬಣವೆ [illegible]ದ್ದಲ್ಲಿ ತಕ್ಷಣ ಒಕ್ಕಬೇಕು ಎಂದೂ ತಿಳಿಸಿದ್ದಾರೆ.

ಧುಮ್ಮಿಕ್ಕುವ ಜಲಧಾರೆಯಿಂದ ಮನೆಗೆಲ್ಲ ಬೆಳಕು

ಕೊಡಗು ಜಿಲ್ಲೆಯ ಕಡಿದಾದ ಪ್ರದೇಶದಲ್ಲಿರುವ ಈ ಮನೆಗೆ ಕೆಇಬಿ ಕರೆಂಟಿನ ಭಾಗ್ಯ ಬಲು ದೂರ. ಆದರೇನು, ರಾತ್ರಿ ಹೊತ್ತು ಬೆಳಕು ಕೊಡಲು ಬೇಕಾದಷ್ಟು ವಿದ್ಯುತ್ತನ್ನು ಇವರೇ ಉತ್ಪಾದಿಸಿಕೊಳ್ಳುತ್ತಾರೆ. ಜಿಲ್ಲೆಯ ಉಳಿದ ಮನೆಗಳಲ್ಲಿ ವಿದ್ಯುತ್ ಕೈ ಕೊಟ್ಟಾಗಲೂ ಈ ಮನೆಯಲ್ಲಿ ಮಂದ ಬೆಳಕು ಹೊರ ಹೊಮ್ಮುತ್ತಿರುತ್ತದೆ. ಇದು ನಡೆದಿರುವುದು ಮಡಿಕೇರಿಯ ಬಳಿಯ ಮದೆನಾಡಿನ ಕೃಷ್ಣ ರಾವ್ ಅವರ ಮನೆಯಲ್ಲಿ.

ಅನತಿ ದೂರದಲ್ಲೊಂದು ಕಿರು ಜಲಪಾತ. ಸದಾಕಾಲ ಹುಯ್ಯುತ್ತಿರುವ ಜಲಧಾರೆ. ಕೃಷಿ ಬಳಕೆಗಾಗಿ ಅಲ್ಲಿಂದ ಕಾಲುವೆ ಮುಖಾಂತರ ತಂದ ನೀರು ಅಗತ್ಯ ಪೂರೈಸಿ ಮತ್ತೂ ಮಿಕ್ಕುಳಿಯುತ್ತಿತ್ತು. ಇದನ್ನು ಕಂಡ ತರುಣ ಕೃಷ್ಣರಾವ್‌ಗೆ ಈ ನೀರನ್ನು ಬಳಸಿ ವಿದ್ಯುತ್ ಉತ್ಪಾದಿಸಬಾರದೇಕೆ ಅನಿಸಿತು.

ಕೃಷ್ಣರಾವ್ ಕೂಡಲೇ ಕಾರ್ಯಪ್ರವೃತ್ತರಾದರು. ಮಡಿಕೇರಿಯ ವರ್ಕ್‌ಶಾಪ್‌ನಲ್ಲಿ ತನ್ನ ಕಲ್ಪನೆಗೆ ರೂಪ ಕೊಡಿಸಿದರು. ಕಬ್ಬಿಣದ ಶಾಫ್ಟಿನ ಸುತ್ತ ತಿರುಗುವ ದೊಡ್ಡ ಚಕ್ರ. ಚಕ್ರದ ಹೊರಮೈಯಲ್ಲಿ ಒಂದರ ನಂತರ ಒಂದು ಜೋಡಿಸಿದ ಸ್ಟೈನ್‌ಲೆಸ್ ಸ್ಟೀಲಿನ ಹಣ್ಣಿನ ಬಟ್ಟಲುಗಳು (fruit bowls.) ಚಕ್ರ ತಿರುಗಿದಾಗ, ಗುಜರಿಯಿಂದ ಕೊಂಡು ತಂದ ಹಳೆಯ ಜೀಪಿನ ಡೈನೆಮೊಕ್ಕೆ ಆವರ್ತನಗಳ ವರ್ಗಾವಣೆ. ಅಲ್ಲಿ ಉತ್ಪಾದನೆಯಾಗುವ ವಿದ್ಯುತ್ತು, ತಂತಿಗಳ ಮೂಲಕ ಹರಿದು ಮನೆಯಲ್ಲಿ ಇಟ್ಟಿರುವ ಎರಡು ವಾಹನದ ಬ್ಯಾಟರಿಗಳಲ್ಲಿ ಸಂಗ್ರಹ. ಬ್ಯಾಟರಿಗಳಿಂದ ಮನೆಯ ಬಲ್ಬುಗಳಿಗೆ, ಟಿ.ವಿ., ಟೇಬಲ್ ಲ್ಯಾಂಪ್‌ಗಳಿಗೆ ಸಂಪರ್ಕ.

ಹರಿದು ಬರುವ ನೀರನ್ನು ಸಂಜೆ ಹೊತ್ತು ಈ ಟರ್ಬೈನ್‌ನತ್ತ ಹೋಗುವಂತೆ ಮಾಡುತ್ತಾರೆ. ಇದಕ್ಕಾಗಿ ಅವರೇ ಸರಳವಾದ ಎರಡು ಕವಾಟ ರಚಿಸಿಕೊಂಡಿದ್ದಾರೆ. ಸುಮಾರು 60 ಅಡಿ ಮೇಲಿನಿಂದ 2 ಇಂಚು ವ್ಯಾಸದ ಎರಡು ಗ್ಯಾಲ್ವನೈಸ್ಡ್-ಪೈಪುಗಳ ಮುಖಾಂತರ ನೀರು ಕೆಳಗೆ ಹರಿಯುತ್ತದೆ. ಹರಿದು ಬಂದ ನೀರು ರೆಡ್ಯೂಸರ್ ಪೈಪುಗಳ ಮುಖಾಂತರ ಹಾಯ್ದು ರಭಸದಿಂದ ಟರ್ಬೈನಿನ ಚಕ್ರದ ಎರಡು ಬಿಂದುಗಳಿಗೆ ಹೊಡೆಯುತ್ತದೆ. ಚಕ್ರ ತಿರುಗುತ್ತದೆ. ವಿದ್ಯುತ್ ಉತ್ಪಾದನೆಯಾಗಿ ಬ್ಯಾಟರಿ ಸೇರುತ್ತದೆ.

ಸಂಜೆ 5ರಿಂದ ರಾತ್ರಿ 9ರವರೆಗೆ–ದಿನಕ್ಕೆ ಸುಮಾರು ನಾಲ್ಕು ಗಂಟೆಗಳ ಕಾಲ–ಕೃಷ್ಣ ರಾವ್ ತಮ್ಮ ಟರ್ಬೈನ್ ನಡೆಸುತ್ತಾರೆ. ಅಷ್ಟರಲ್ಲಿ ಬ್ಯಾಟರಿಗಳು ಬೇಕಾದಷ್ಟು ಚಾರ್ಜ್ ಆಗುತ್ತವಂತೆ. ಮನೆಯ ಕೋಣೆಗಳಿಗೆ ವಾಹನಗಳಲ್ಲಿ ಬಳಸುವ 10 ಪುಟ್ಟ ಬಲ್ಬು ಜೋಡಿಸಿದ್ದಾರೆ. ಅಷ್ಟೊಂದು ಪ್ರಖರವಲ್ಲದಿದ್ದರೂ ಅಡ್ಡಿ ಇಲ್ಲ ಎನ್ನಬಹುದಾದ ಬೆಳಕು. ಹೆಚ್ಚಾಗಿ ಬಳಸುವುದು 6 ಬಲ್ಬುಗಳನ್ನು ಮಾತ್ರ. ಇದಲ್ಲದೆ ಉತ್ಪಾದನೆಯಾಗುವ DC ವಿದ್ಯುತ್‌ನಿಂದ ಅವರ ಟೀವಿಯೂ ನಡೆಯುತ್ತದೆ. ಇನ್‌ವರ್ಟರ್ ಮುಖಾಂತರ ಕರೆಂಟನ್ನು ACಗೆ ಪರಿವರ್ತಿಸಿ, ಓದುವಾಗ ಬಳಸಲೆಂದು ಟೇಬಲ್ ಲ್ಯಾಂಪನ್ನೂ ಜೋಡಿಸಿಕೊಂಡಿದ್ದಾರೆ.

ಮೂರು ವರ್ಷಗಳಿಂದ ಸತತವಾಗಿ ನಡೆಯುತ್ತಿರುವ ಈ ಟರ್ಬೈನ್ ರಾವ್‌ಗೆ ಏನೂ ತೊಂದರೆ ಕೊಟ್ಟಿಲ್ಲ. ಪದವಿ ಕೋರ್ಸ್ ಮಾಡಿ ಅಲ್ಲಿಗೇ ಬಿಟ್ಟ ಈ ಉತ್ಸಾಹಿಗೆ ಎಂಜಿನಿಯರಿಂಗ್ ಹಿನ್ನೆಲೆ ಇಲ್ಲ. ತನ್ನದೇ ಆಲೋಚನೆಯ ಪ್ರಕಾರ ಮಾಡಿದ ಈ ವಿನ್ಯಾಸದಲ್ಲಿ 'ತಜ್ಞ ಇಂಜಿನಿಯರ್‌ಗಳ ಸಲಹೆ ಪಡೆದು ಇನ್ನೂ ಅಭಿವೃದ್ಧಿ ಮಾಡಬಹುದು' ಎನ್ನುತ್ತಾರೆ.

ರಾವ್ ಅವರಿಗೆ ತನ್ನ ಟರ್ಬೈನಿಗೆ ತಗಲಿದ ಖರ್ಚು–ಪೈಪು ಬ್ಯಾಟರಿಗಳ ಖರ್ಚು ಹೊರತುಪಡಿಸಿ, ರೂ. 2500. ತನ್ನಲ್ಲಿದ್ದ ಹಳೆ ಪೈಪುಗಳನ್ನೇ ಬಳಸಿಕೊಂಡಿದ್ದಾರೆ. ಬ್ಯಾಟರಿಗಳೂ ಅಷ್ಟೇ, ಹಳೆಯವು. "ತೀರಾ 'ಡೆಡ್' ಆಗಿರದ ಹಳೆ ಬ್ಯಾಟರಿಗಳು ಸಾಕು" ಎನ್ನುತ್ತಾರೆ. ಇಂಥ ಬ್ಯಾಟರಿಗಳು ಸುಮಾರು 2 ವರ್ಷ ಬಾಳಿಕೆ ಬರುತ್ತವಂತೆ.

ಜಲ ಟರ್ಬೈನಿನಿಂದ ವಿದ್ಯುತ್ ಉತ್ಪಾದಿಸುವ ಈ ವ್ಯವಸ್ಥೆಗೆ ತಗಲುವ ನಿರ್ವಹಣಾ ವೆಚ್ಚ ಅತ್ಯಲ್ಪ. ಬೆಲ್ಟು, ಬೇರಿಂಗ್ ಗ್ರೀಸ್—ಇಂಥವುಗಳಿಗೆ ಅಲ್ಪ ಸ್ವಲ್ಪ ಗಮನ ಬೇಕು, ಅಷ್ಟೆ.

ನಿರಂತರವಾಗಿ ಎತ್ತರದ ಜಾಗದಿಂದ ಹರಿದು ಬರುವ ಧಾರಾಳ ನೀರಿದ್ದರೆ ಯಾರೂ ಅಂಥ ಟರ್ಬೈನ್ ಮಾಡಿಸಿಕೊಂಡು ವಿದ್ಯುತ್ ಉತ್ಪಾದಿಸಬಹುದು. ವರ್ಷದಲ್ಲಿ 6 ತಿಂಗಳ ಕಾಲ ಇಂಥಾ ನೀರು ಸಿಗುವವರಿಗೂ ಪರ್ಯಾಯ ವ್ಯವಸ್ಥೆಯಾಗಿ DC ವಿದ್ಯುತ್ ಉತ್ಪಾದನೆಯಿಂದ ಪ್ರಯೋಜನವಾಗಬಹುದು. ಆದರೆ DC ವಿದ್ಯುತ್ತನ್ನು ಉತ್ಪಾದನೆಯಾಗುವ ಜಾಗದಿಂದ ಬಹಳ ದೂರ ಒಯ್ಯಲು ಬರುವುದಿಲ್ಲ. "ಅಲ್ಲಿ ಡೈನೆಮೋದಲ್ಲಿ 5 ಆ್ಯಂಪ್ಸ್ ವಿದ್ಯುತ್ ಉತ್ಪಾದನೆಯಾದರೆ 200 ಅಡಿ ದೂರ ತಂದಾಗ ಸಿಗುವುದು ಕೇವಲ 3 ಆ್ಯಂಪ್ಸ್" ಎನ್ನುತ್ತಾರೆ ರಾವ್.

ಮಲೆನಾಡಿನ ಕೆಲವೆಡೆ ಹೀಗೆ ಹರಿಯುವ ನೀರಿನಿಂದ ವಿದ್ಯುತ್ ಉತ್ಪಾದಿಸಿ ಬಳಸಿಕೊಳ್ಳುವ ಅವಕಾಶಗಳಿವೆ. ಸ್ವಾವಲಂಬನೆಯ ದೃಷ್ಟಿಯಿಂದ ಇದು ಉತ್ತಮ ಯೋಜನೆ. ಇಂಥಾ ವ್ಯವಸ್ಥೆಗಳಿಗೆ ಕೇಂದ್ರ ಸರ್ಕಾರದ ಅಸಾಂಪ್ರದಾಯಿಕ ಇಂಧನ ಮೂಲಗಳ ಇಲಾಖೆ ಸಬ್ಸಿಡಿ ನೀಡುವಂತಾಗಬೇಕು.

ವಿಳಾಸ : ಎಂ.ಎಸ್. ಕೃಷ್ಣರಾವ್,
ಅಂಚೆ : ಮದೆನಾಡು,
ಕೊಡಗು ಜಿಲ್ಲೆ 571 201

ಈ ಜಾಗ ಜೋಡುಪಾಲದಿಂದ 2 ಕಿ.ಮೀ. ದೂರದಲ್ಲಿ, ಪುತ್ತೂರು–ಮಡಿಕೇರಿ ಹೆದ್ದಾರಿಯ ಅಂಚಿನಲ್ಲಿದೆ.

(ಸೌಜನ್ಯ : ಅಡಿಕೆ ಪತ್ರಿಕೆ)

ಇಂಗ್ಲಿಷ್

ನನ್ನ ಸ್ನೇಹಿತರು ಒಬ್ಬ ದೊಡ್ಡ ಡಾಕ್ಟರು ಇದ್ದಾರೆ. ಅವರಿಗೆ ಕನ್ನಡದಲ್ಲಿ ಅಭಿಮಾನ. ಒಂದು ದಿನ ಒಬ್ಬಾತ ಅವರಲ್ಲಿಗೆ ಹೋಗಿ, "ಸಾರ್, ನಿನ್ನೆ ನೈಟು ನನ್ನ ವೈಫಿಗೆ ಫೀವರ್ ಬಂದು, ಫೋರ್ ಫೈವ್ ಟೈಮ್ಸ್ ವಾಮಿಟ್ ಆಯಿತು. ಸ್ವಲ್ಪ ಎಕ್ಸಾಮಿನ್ ಮಾಡಿ ಮೆಡಿಸಿನ್ ಕೊಡಬೇಕು" ಎಂದರಂತೆ. ಅದಕ್ಕೆ ನನ್ನ ಸ್ನೇಹಿತರು, "ಆಕೆ ಕಮ್ ಮಾಡಿದ್ದರೆ, ಇಲ್ಲಿ ಸಿಟ್ ಮಾಡಿಸಿ. ನಾನು ಸೀ ಮಾಡುತ್ತೇನೆ" ಎಂದರಂತೆ.

(—ಡಿ. ವಿ. ಜಿ. ಯವರ
ಜೀವನ ಸಾರ್ಥಕ್ಯ ದೀಪಿಕೆಯಿಂದ)
(ಸೌಜನ್ಯ : ಗಾಂಧಿ ಬಜಾರ್)

ಕೊಪ್ಪ ಠಾಣೆಯಲ್ಲಿ 'ರೌಡಿ'ಗಳಾದ ಕಾರ್ಮಿಕ ಮುಂದಾಳುಗಳು !

ಕಳೆದ ಶನಿವಾರ ಜೂನ್ 16ರಂದು ಶಂಕರ್ ಸಾರಿಗೆ ಸಂಸ್ಥೆಯ ಕಾರ್ಮಿಕ ಮುಂದಾಳುಗಳಾದ ಚಿಕ್ಕೇಗೌಡ ಮತ್ತು ಸಂಜೀವ ಇವರುಗಳ ಬಗ್ಗೆ ಕೊಪ್ಪ ಸಬ್‌ಇನ್‌ಸ್ಪೆಕ್ಟರ್ ದುಗ್ಗಪ್ಪ ಅವರು 'ರೌಡಿ ಶೀಟ್' ಆರಂಭಿಸುವ ಕ್ರಮ ಜರುಗಿಸಿ, ತಹಸೀಲ್ದಾರರಿಂದ ಅವರಿಗೆ ಜಾಮೀನನ್ನೂ ನಿರಾಕರಿಸಿ, ಅವರನ್ನು ಶಿವಮೊಗ್ಗ ಜೈಲಿಗೆ ಕಳಿಸಿದ್ದು ಕೊಪ್ಪ ಮತ್ತು ಸುತ್ತಮುತ್ತ ಕುತೂಹಲ ಹುಟ್ಟಿಸಿದೆ.

ಇವರ ವಿರುದ್ಧ ಕ್ರಿಮಿನಲ್ ಪ್ರೊಸೀಜರ್ ಕೋಡ್ (ಅಪರಾಧ ಸಂಹಿತೆ) ಕಲಂ 110–ಜಿ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ. "ಕೊಪ್ಪ ಠಾಣೆಯ ಸರಹದ್ದಿನಲ್ಲಿ 1987ರಿಂದ 1990ರ ಅವಧಿಯಲ್ಲಿ ಕ್ರಿಮಿನಲ್ ಚಟುವಟಿಕೆಯಲ್ಲಿ ತೊಡಗಿ ಸಮಾಜಕ್ಕೆ ಅಪಾಯಕರವಾಗಿ ವರ್ತಿಸಿದ ಬಗ್ಗೆ" ಈ ಕ್ರಮ ಕೈಗೊಳ್ಳುತ್ತಿರುವುದಾಗಿಯೂ, ಇವರುಗಳು "ಹಲವು ಕ್ರಿಮಿನಲ್ ಕೇಸುಗಳಲ್ಲಿ ಭಾಗಿಯಾಗಿದ್ದು, ಕಾನೂನು–ಕಾಯಿದೆಗೆ ಬೆಲೆ ಕೊಡುವವರಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಅವರ ನಡವಳಿಕೆ ಸಮಾಜಕ್ಕೆ ಅಪಾಯಕಾರಿಯಾಗಿದ್ದರಿಂದ" ಇವರ ವಿರುದ್ಧ ಕ್ರಮ ಕೈಗೊಳ್ಳಬೇಕಾಗಿಯೂ ಪೋಲೀಸರು ತಾ॥ ಮ್ಯಾಜಿಸ್ಟ್ರೇಟರಿಗೆ ಸಲ್ಲಿಸಿದ ವರದಿಯಲ್ಲಿ ತಿಳಿಸಿದ್ದಾರೆ.

ಈ ವರದಿಯ ಪ್ರಕಾರ ಇವರುಗಳ ವಿರುದ್ಧ ಇರುವ ಮೊಕದ್ದಮೆಗಳು :

1) 97/87 : ಕಲಂ 107 ಸಿಆರ್. ಪಿ. ಸಿ.–ಶಂಕರ್ ಸಾರಿಗೆ ವಿರುದ್ಧ ಶಾಂತಿ ಭಂಗ ಮಾಡಲು ಯತ್ನಿಸಿದಾಗ ಕ್ರಮ ಕೈಗೊಂಡಿರುವುದು.

2) 24/88 : 2-3-88 ರಂದು ನಂಜುಂಡಯ್ಯ ಎಂಬವರ (ಶಂಕರ್ ಕಂಪೆನಿ ಆಡಳಿತಾಧಿಕಾರಿ) ಕಛೇರಿಗೆ ಅಕ್ರಮ ಪ್ರವೇಶ ಮಾಡಿ ಕೈಯಿಂದ ಹಲ್ಲೆ ನಡೆಸಿ, ಜೀವಭಯ ಹಾಕಿರುವುದು.

3) 86/88 : 21-11-88 ರ ರಾತ್ರಿ 9 ಗಂಟೆಗೆ ಕೊಪ್ಪ ಸಬ್‌ಇನ್‌ಸ್ಪೆಕ್ಟರ್ ವಾಹನಗಳ ಮೇಲೆ ಕೇಸು ದಾಖಲು ಮಾಡಿದರು ಎಂಬ ದ್ವೇಷದಿಂದ ತನ್ನೊಂದಿಗೆ ಸುಮಾರು 100 ಜನರನ್ನು ಸೇರಿಸಿಕೊಂಡು ಅಕ್ರಮ ಕೂಟ ಕೂಡಿ ಮಾರಕ ಆಯುಧಗಳನ್ನು ಹಿಡಿದು ಠಾಣೆಗೆ ನುಗ್ಗಿ, ಕಲ್ಲುಗಳನ್ನು ಬಿಸಾಡಿ ಪೋಲೀಸ್ ಸಿಬ್ಬಂದಿಯ ಮೇಲೆ ಹಲ್ಲೆ ಮಾಡಿರುತ್ತಾರೆ: ಈ ಬಗ್ಗೆ ನ. ರಾ. ಪುರದ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ವಿಚಾರಣೆಯಲ್ಲಿದೆ.

"ಈ ಕ್ರಿಮಿನಲ್ ಹಿನ್ನೆಲೆಯನ್ನು ಗಮನಿಸಿದಾಗ ಕಾನೂನು ಬಾಹಿರ ಚಟುವಟಿಕೆ ಮತ್ತು ಗೂಂಡಾ ಸ್ವಭಾವದಿಂದ ಸಮಾಜಘಾತಕ ಶಕ್ತಿಯಾಗಿ ಬೆಳೆದು ಸಮಾಜಕ್ಕೆ ಅಪಾಯಕಾರಿಯಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಇವರ ವಿರುದ್ಧ ಕ್ರಮ ಜರುಗಿಸಿ, ಬಂದೋಬಸ್ತು ಮಾಡಬೇಕೆಂದು" ಸಬ್‌ಇನ್‌ಸ್ಪೆಕ್ಟರು ತಾ॥ ಮ್ಯಾಜಿಸ್ಟ್ರೇಟರಲ್ಲಿ ವಿನಂತಿಸಿದ್ದಾರೆ.

ಜೂನ್ 11ರಂದು ಠಾಣೆಗೆ ಭೇಟಿ ನೀಡಿದ್ದ ನೂತನ ಎಸ್ಪಿ ಚಿಕ್ಕೆರೂರ್‌ರವರು ಹಳೆಯ ಕಡತಗಳನ್ನು ಪರಿಶೀಲಿಸುತ್ತಿದ್ದಾಗ ಮೇಲ್ಕಂಡ (3)ರಲ್ಲಿನ ಪ್ರಕರಣ ಅವರ ಕಣ್ಣಿಗೆ ಬಿದ್ದು, ಕೂಡಲೇ ಇವರುಗಳ ವಿರುದ್ಧ ರೌಡಿ ಶೀಟ್ ತೆರೆಯಲು ಆದೇಶಿಸಿದರೆಂದು ಸಬ್‌ಇನ್‌ಸ್ಪೆಕ್ಟರ್ ತಿಳಿಸಿದ್ದಾರೆ. ಈ ಪ್ರಕರಣದಲ್ಲಿ ಸಿಪಿಐ ಕಾರ್ಯದರ್ಶಿ ಎಸ್. ಆರ್. ರಾಮಚಂದ್ರ, ಗುಣವಂತೆ ಪರಮೇಶ್ವರ ಮತ್ತು ವಿೂರಾಸಾಬ್ ಎಂಬ ಡ್ರೈವರ್ ಕೂಡ ಪ್ರಮುಖ ಆರೋಪಿಗಳಂತೆ.

(ಡಿ.ಕೆ. ನಾಗರಾಜ ಎಂಬ ಕಳ್ಳನ ಬಗ್ಗೆ 'ಹಿಸ್ಟರಿ ಶೀಟ್' ಆರಂಭಿಸಲು ಹಾಗೂ ಬಾಲಾಜಿ ಎಂಬವನ ವಿರುದ್ಧ ರೌಡಿ ಶೀಟ್ ಆರಂಭಿಸಲು ಕೂಡ ಎಸ್ಪಿ ಸೂಚಿಸಿದ್ದಾರಂತೆ)

ರಾಮಚಂದ್ರ ಅವರ ವಿರುದ್ಧವೂ ರೌಡಿ ಶೀಟ್ ತೆರೆಯುವ ಕ್ರಮ ಕೈಗೊಂಡಿದ್ದಾರೆ. ಮಿಕ್ಕ ಆರೋಪಿಗಳ ಬಗ್ಗೆ ಇನ್ನೂ ಈ ಕ್ರಮ ಜರುಗಿಲ್ಲ. ಆದರೆ ರಾಮಚಂದ್ರ ಅವರಿಗೆ 'ವಿಧೇಯತೆ'ಯ ಕಾರಣ ಕೊಪ್ಪದಲ್ಲೇ ಜಾಮೀನು ನೀಡಲು ಸ. ಇ. ಒಪ್ಪಿದರೆ, ಸಂಜೀವ, ಚಿಕ್ಕೇಗೌಡರಿಗೆ ಮೊದಲ ದಿನ ಜಾಮೀನಿಗೆ ಅವಕಾಶವೇ ಇಲ್ಲದಂತೆ ಮಾಡಿದ್ದಲ್ಲದೆ, ಸೋಮವಾರ ಅವರ ಸ್ನೇಹಿತರು ಜಾಮೀನಿಗೆ ಅರ್ಜಿ ಹಾಕಿದಾಗಲೂ ಅದನ್ನು ಸ.ಇ. ಬಲವಾಗಿ ವಿರೋಧಿಸಿ, ಜಾಮೀನು ನಿರಾಕರಿಸುವ ಮೂಲಕ ಅವರುಗಳು ಜೈಲಲ್ಲೇ ಇರುವಂತೆ ನೋಡಿಕೊಳ್ಳಲಾಯಿತು.

ಅನಂತರ ಚಿಕ್ಕಮಗಳೂರಿನಲ್ಲಿ ಬಿ. ಕೆ. ಸುಂದರೇಶ್ ಮತ್ತಿತರ ಸಿಪಿಐ ಮುಖಂಡರು ಡಿ.ಸಿ., ಎಸ್ಪಿಗಳ ಜೊತೆ ಚರ್ಚಿಸಿ, ಅವರುಗಳು ಜಾಮೀನಿಗೆ ಅವಕಾಶ ಕಲ್ಪಿಸಿದ ನಂತರ ಜೂನ್ 20ರಂದು ಜಾಮೀನು ಪಡೆದು 21ರ ಮಧ್ಯಾಹ್ನ ಜೈಲಿನಿಂದ ಬಿಡಿಸಿ ಕರೆತರಲಾಯಿತು.

(3ನೇ ಪುಟಕ್ಕೆ)

ಜಿ. ಪ. ಇಂಜಿನಿಯರ್ ಉದ್ಧಟತನ, ಬೇಜವಾಬ್ದಾರಿ: ಸರ್ಕಾರದ ಹಣ ಪೋಲು, ಜನತೆಗೆ ನಷ್ಟ-ಸಂಕಷ್ಟಗಳ ಸರಮಾಲೆ

ಓದುಗರ ಪತ್ರಗಳು

ಪ್ರಿಯರೆ,

ಶೃಂಗೇರಿಯ ಜಿ. ಪ. ಇಂಜಿನಿಯರರ ಬೇಜವಾಬ್ದಾರಿ ಮತ್ತು ಉದ್ಧಟತನಗಳಿಗೆ ಯಾರೂ ಅವರನ್ನು ಶಿಕ್ಷಿಸುವುದಿರಲಿ, ಕಡಿವಾಣ ಹಾಕುವವರೂ ಇದ್ದಹಾಗೆ ಕಾಣುತ್ತಿಲ್ಲ. ಅದರ ಜೊತೆಗೆ ಕೆಲಸದಲ್ಲಿ ಅದಕ್ಷತೆ ಮತ್ತು ಭ್ರಷ್ಟತೆಗಳೂ ಪರಮಾವಧಿಯಾಗಿದ್ದು, ವಿಕೇಂದ್ರೀಕರಣ ವ್ಯವಸ್ಥೆಯು ಒಂದು ಶಾಪದಂತೆ ಇವರು ಗ್ರಾಮೀಣ ಜನತೆಗೆ ಸಂಕಷ್ಟಗಳ ಸರಮಾಲೆಯನ್ನೇ ಸೃಷ್ಟಿಸುತ್ತಿದ್ದಾರೆ. ಅದರ ಒಂದೆರಡು ಮಾದರಿಗಳು ಇಲ್ಲಿವೆ.

1) ಕಿಗ್ಗದ ಬಳಿಯ ದೋಣಾರಿನಲ್ಲಿ ನಂದಿನಿ ನದಿಗೆ ಈಗ್ಗೆ 3 ವರ್ಷದ ಹಿಂದೆ ಕಟ್ಟಿಸಿದ ಕಾಲು ಸೇತುವೆ ನೂರಾರು ಜನರಿಗೆ ಪ್ರಯೋಜನವಾಗಿತ್ತು. ಆದರೆ ಸೇತುವೆಯ ಎರಡೂ ಕಡೆ ಕೇವಲ ಮಣ್ಣು ತುಂಬಿಸಿ ಸೇತುವೆಯ ಮಟ್ಟಕ್ಕೇರಿಸಿದ್ದರು. ಹೊಳೆಯ ನೀರು ಮಳೆಗಾಲದಲ್ಲಿ ಈ ರಸ್ತೆಯ ಮೇಲೆ ನುಗ್ಗದಂತೆ ತಡೆಯಾಗಿದ್ದ ಒಂದು ಬಿದಿರು ಮೆಳೆ ಕಳೆದ ವರ್ಷ ಕೊಚ್ಚಿ ಹೋದುದರಿಂದ ನೆರೆಯ ನೀರೆಲ್ಲ ಸೇತುವೆಯನ್ನು ಬಿಟ್ಟು ರಸ್ತೆಯ ಮೇಲೆ ಹರಿಯತೊಡಗಿತು. ಇದರಿಂದ, ಜನರು ಮೊದಲು ಹೊಳೆ ದಾಟಿ ಆ ಮೇಲೆ ಸೇತುವೆ ದಾಟಿ ಮುಂದೆ ಹೋಗುವಂತಾಗಿತ್ತು (!)

ಮಳೆಗಾಲದ ಮುಕ್ತಾಯದಲ್ಲಿ ನಡೆದ ಗ್ರಾಮ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾದಾಗ ಜಿ.ಪ. ಇಂಜಿನಿಯರರು, ಹೊಳೆಯ ನೀರು ರಸ್ತೆಗೆ ಹತ್ತದಂತೆ ಅಡ್ಡಲಾಗಿ ಭದ್ರವಾದ ತಡೆಗೋಡೆ ಕಟ್ಟುವ ಭರವಸೆ ಕೊಟ್ಟಿದ್ದರು. ಆದರೆ ಸ್ಥಳೀಯ ಅನನುಭವಿ ಕಂಟ್ರಾಕ್ಟರ್ ಒಬ್ಬರಿಗೆ ಗುತ್ತಿಗೆ ನೀಡಿದ್ದು, ಅವರು ಸಾಕಷ್ಟು ತಳಪಾಯವಿಲ್ಲದೆಯೇ ತಡೆಗೋಡೆ ನಿರ್ಮಾಣ ಆರಂಭಿಸಿದರು. ಆಗ ಆ ಭಾಗದ ಜನರು ಇದನ್ನು ವಿರೋಧಿಸಿ, ಸರಿಯಾಗಿ ತಳಪಾಯ ಕಟ್ಟುವಂತೆ ಹಾಗೂ ಸಮರ್ಪಕವಾಗಿ ಸಿಮೆಂಟ್ ಬಳಸುವಂತೆ ಒತ್ತಾಯಿಸಿದರೂ ಅವರು ಕೇಳದೆ ಕೆಲಸ ಮುಂದುವರಿಸಿದರು

ಅದೇ ಸಮಯದಲ್ಲಿ ಏಪ್ರಿಲ್ ತಿಂಗಳ ಗ್ರಾಮ ಸಭೆಯಲ್ಲಿ ಈ ವಿಷಯವನ್ನು ಜಿ. ಪ. ಇಂಜಿನಿಯರ್ ಗಮನಕ್ಕೆ ತಂದಾಗ ಅವರು ಕಂಟ್ರಾಕ್ಟರರ ಪಕ್ಷವನ್ನೇ ವಹಿಸಿ ಮಾತನಾಡಿದರು ಆಕ್ರೋಶಗೊಂಡ ಗ್ರಾಮಸ್ಥರು, "ರಕ್ಷಣೆ ಗೋಡೆಗೆ ಸಿಮೆಂಟ್ ಬದಲು ಬೂದಿಯಂಥದನ್ನು ಹಾಕಿ ಕಟ್ಟಿದ್ದಾರೆ. ಈ ವರ್ಷ ಮಳೆಗಾಲದಲ್ಲಿ ಅದು ಖಂಡಿತ ಬಿದ್ದುಹೋಗುತ್ತೆ" ಎಂದು ಎಚ್ಚರಿಸಿದಾಗ, "ಹೋದರೆ ಹೋಯಿತು ಮುಂದಿನ ವರ್ಷ ಇನ್ನೂ ಚೆನ್ನಾಗಿ ಕಟ್ಟಿಸುತ್ತೇವೆ" ಎಂದು ಬೇಜವಾಬ್ದಾರಿಯ ಮಾತನಾಡಿದರು. "ಸರ್ಕಾರದ ದುಡ್ಡನ್ನು ಹೀಗೆ ಒಂದೇ ಕಾಮಗಾರಿಗೆ ಖರ್ಚು ಮಾಡುತ್ತಿರುವುದಾ? " ಎಂದುದಕ್ಕೆ, "ನೋಡ್ರಿ, ನಾನು ಇಂಜಿನಿಯರ್ರು. ಅದು ಎಷ್ಟು ಭದ್ರ ಇದೆ ಅಂತ ನಿಮಗಿಂತ ನನಗೆ ಚೆನ್ನಾಗಿ ಗೊತ್ತು" ಎಂದು ಉಡಾಫೆ ಮಾಡಿದರು. ಆದರೂ ಗ್ರಾಮಸ್ಥರಿಗೆ ಸಮಾಧಾನವಾಗದಿದ್ದಾಗ, "ಆಕಸ್ಮಾತ್ ಒಂದು ಕಲ್ಲು ಬಿದ್ದುಹೋದರೆ ಎರಡು ಕಲ್ಲು ಹಾಕಿ ಕಟ್ಟಿಸಿಕೊಡುವುದು ನನ್ನ ಜವಾಬ್ದಾರಿ" ಎಂದು ಕೊಚ್ಚಿಕೊಂಡರು.

ಆದರೆ, ಮಳೆಗಾಲದ ಪ್ರಾರಂಭದ ಮಳೆಗೇ ಈ ರಕ್ಷಣಾ ಗೋಡೆ ಕುಸಿದಿದೆ; 10 ಅಡಿ ಉದ್ದದ ಗೋಡೆ ಹೊಳೆಗೆ ಬಿದ್ದಿದೆ. ಮಣ್ಣು ಸಹ ಕುಸಿದಿದ್ದು, ಸೇತುವೆಯ ಮೇಲೆ ವಾಹನಗಳು ಸಂಚರಿಸುವಂತಿಲ್ಲ.

ಈ ಉದ್ಧಟ ಅಧಿಕಾರಿ ಈಗ ಏನು ಹೇಳುತ್ತಾರೆ?

2) ರೋಜ್‌ಗಾರ್ ಯೋಜನೆಯಲ್ಲಿ, ಈ ಸೇತುವೆಯಿಂದ ಸಿರಿಮನೆ, ಚಟ್ನಮನೆಗೆ 6 ಕಿ. ಮಿ. ಸಂಪರ್ಕ ರಸ್ತೆಯನ್ನು ಈ ಮಳೆಗಾಲಕ್ಕೆ ಮೊದಲು ರಿಪೇರಿ ಮಾಡಲಾಗಿದೆ. (ಅದರಲ್ಲೂ ಕಡೆಯ ಅರ್ಧ ಕಿ. ಮಿ ರಸ್ತೆ ಸ್ಥಳೀಯ ವಿವಾದವೊಂದರ ಕಾರಣ ಮುಂದುವರಿಯಲಿಲ್ಲ. ಆದರೂ

(4ನೇ ಪುಟಕ್ಕೆ)

ನಿಂತು ಹೋಗಿರುವ ಬಸ್ ಪುನರಾರಂಭಕ್ಕೆ ಒತ್ತಾಯ

ಕೊಪ್ಪ: ಇಲ್ಲಿಂದ ಮಧ್ಯಾಹ್ನ 11–45 ಕ್ಕೆ ಉತ್ತಮೇಶ್ವರ ಮಾರ್ಗವಾಗಿ ಶೃಂಗೇರಿಗೆ ಹೋಗುತ್ತಿದ್ದ ಉದಯ ಮೋಟಾರ್ಸ್‌ನವರ ತಾವರೆಕೆರೆ–ಶೃಂಗೇರಿ ಬಸ್ಸು ಕಳೆದ ಒಂದು–ಒಂದೂವರೆ ತಿಂಗಳಿಂದ ನಿಂತು ಹೋಗಿದ್ದು, ಉತ್ತಮೇಶ್ವರ, ಬೇವಿನಕೊಡಿಗೆ, ದಯಂಬಳ್ಳಿ ಭಾಗದ ಹತ್ತಾರು ಹಳ್ಳಿಗಳವರಿಗೆ ತೀರಾ ಅನಾನುಕೂಲವಾಗಿದೆ. ಆ ಹೊತ್ತಿನಲ್ಲಿ ಅದೇ ಕಂಪೆನಿಯವರಾಗಲಿ ಬೇರೆ ಕಂಪೆನಿಯವರಾಗಲಿ ಒಂದು ಬಸ್ ಓಡಿಸುವಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ ಈ ಕುರಿತು ಮಂಡಲ ಪಂಚಾಯ್ತಿಯಿಂದ ಈಗಾಗಲೇ ಸಂಬಂಧಿಸಿದ ಅಧಿಕಾರಿಗಳಿಗೆಲ್ಲ ಮನವಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಕಾರ್ಡ್ ಚಳುವಳಿ : ಪರಿಸರಾಸಕ್ತರ ಗಮನಕ್ಕೆ

ಕೇಂದ್ರದ ಪರಿಸರ ಖಾತೆಯ ಮಂತ್ರಿ ಮೇನಕಾ ಗಾಂಧಿಯವರಿಗೆ ಪರಿಸರ ಸಂರಕ್ಷಣೆಯ ಕಾಯ್ದೆಗಳನ್ನು ದೃಢವಾಗಿ ಅನುಷ್ಠಾನಕ್ಕೆ ತರಲು ಮುಕ್ತ ಅವಕಾಶ ನೀಡುವಂತೆ ಪ್ರಧಾನ ಮಂತ್ರಿಯವರನ್ನು ಒತ್ತಾಯಿಸಲು ಕಾರ್ಡ್ ಚಳುವಳಿಗೆ ಕೊಪ್ಪ ತಾ|| ಪರಿಸರ ಜಾಗೃತಿ ವೇದಿಕೆ ಕರೆ ಕೊಟ್ಟಿದೆ. 17–6–90ರ 'ಮುಂಜಾವು' ನೋಡಿ.

"ಪರಿಸರದ ಬಗ್ಗೆ ಅಂಧ ವಿಶ್ವಾಸ ಬೇಡ"

ಪ್ರಿಯರೆ,

ನಿಮ್ಮ 17.6.90ರ ಸಂಚಿಕೆಯಲ್ಲಿ ಪ್ರಕಟವಾದ "ಮೇನಕಾ ಗಾಂಧಿ : ಪರಿಸರ ಇಲಾಖೆಗೊಬ್ಬರು ಪ್ರಾಮಾಣಿಕ ಕಾಳಜಿಯುಳ್ಳ ಮಂತ್ರಿ" ಎಂಬ ಲೇಖನಕ್ಕೆ ಪ್ರತಿಕ್ರಿಯೆ:

ಶ್ರೀಮತಿ ಮೇನಕಾ ಗಾಂಧಿಯವರು ಕೇಂದ್ರ ಸರ್ಕಾರದ ಪ್ರಾಮಾಣಿಕ ಸಚಿವೆ ಎಂಬುದರಲ್ಲಿ ಅನುಮಾನವಿಲ್ಲ. ಅದರಲ್ಲಿಯೂ ಅವರಿಗೆ ಪರಿಸರದ ಮೇಲೆ ಅತ್ಯಂತ ಕಾಳಜಿ ಇದೆ ಎನ್ನುವುದರಲ್ಲೂ ಸಂದೇಹವಿಲ್ಲ. ಪರಿಸರದ ವೈವಿಧ್ಯತೆಯನ್ನು ಸಂರಕ್ಷಿಸಬೇಕು; ಅದರಲ್ಲಿ ನಮ್ಮ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂಬುದೂ ನಿಜ. ಆದರೆ ಇಂತಹ ನಂಬಿಕೆಯಲ್ಲಿ ನಾವು ಅಂಧ ವಿಶ್ವಾಸವನ್ನು ತಾಳಬಾರದೆಂಬುದನ್ನೂ ಸಹ ನಾವು ಅರಿತಿರಬೇಕು. ಇದರ ಕೊರತೆಯೇ ಶ್ರೀಮತಿ ಗಾಂಧಿಯವರಲ್ಲಿ ಕಂಡು ಬರುತ್ತಿದೆ ಎನ್ನುವುದಕ್ಕೆ ಇತ್ತೀಚಿನ ಕೆಲವು ಘಟನೆಗಳೇ ಸಾಕ್ಷಿ.

ದೆಹಲಿಯಲ್ಲಿ ಕರಡಿ ಕುಣಿತದಿಂದಲೇ ಜೀವನ ಸಾಗಿಸುತ್ತಿದ್ದ ಒಬ್ಬ ಬಡ ಭಾರತೀಯನಿಂದ "ಪ್ರಾಣಿ ಹಿಂಸೆ ಆಗುತ್ತಿದೆ" ಎಂಬ ಕಾರಣ ಕೊಟ್ಟು, ಆತನಿಂದ ಆ ಕರಡಿಯನ್ನು ಕಸಿದುಕೊಂಡು ಪ್ರಾಣಿ ಸಂಗ್ರಹಾಲಯಕ್ಕೆ ಸೇರಿಸಿದ್ದು, ಅನಂತರ ಅದು ಬೇರೆ ವಿವಾದಕ್ಕೆ ಎಡೆಯಾಗಿದ್ದು ವಿಪರ್ಯಾಸ. ಮಾನವನು ಅನಾಗರಿಕತೆಯ ಕಾಲದಿಂದಲೇ ಪ್ರಾಣಿ–ಪಶು–ಪಕ್ಷಿಗಳೊಂದಿಗೆ ಸಂಬಂಧವನ್ನು ಇಟ್ಟುಕೊಂಡೇ ಜೀವಿಸುತ್ತಿದ್ದಾನೆ ಎಂಬುದನ್ನು ಸ್ಮರಿಸಬೇಕು ಸಾಗುವಳಿ ಮಾಡುವಾಗ ರೈತರು ಎತ್ತನ್ನು ಉಪಯೋಗಿಸಿಕೊಳ್ಳುವುದಿಲ್ಲವೆ? ಇದೂ ಶ್ರೀಮತಿ ಗಾಂಧಿಯವರಿಗೆ ಪ್ರಾಣಿ ಹಿಂಸೆ ಎಂದಾದರೆ, ಸಾಗುವಳಿ ಮಾಡುವ ಎಲ್ಲಾ ಎತ್ತುಗಳನ್ನೂ ಪ್ರಾಣಿ ಸಂಗ್ರಹಾಲಯಕ್ಕೆ ಸೇರಿಸುತ್ತಾರೆಯೆ? ಪರಿಸರದ ಮಧ್ಯೆ ಮಾನವನೂ ಬದುಕಿರಬೇಡವೆ? —ಝುಬೇರ್ ಅಹಮದ್, ಕೊಪ್ಪ

ಇದ್ದೂ ಇಲ್ಲದಂತಾಗಿರುವ ಕೊಪ್ಪದ ಸಾರ್ವಜನಿಕ ಗ್ರಂಥಾಲಯ

ಪ್ರಿಯರೆ,

ಕೊಪ್ಪದ ಸಾರ್ವಜನಿಕ ಗ್ರಂಥಾಲಯವು ನೂರಾರು ಜನರ ಪ್ರಯೋಜನಕ್ಕಾಗಿ ಇರುವುದಾಗಿದ್ದು, ಇಲ್ಲಿಗೆ ಪ್ರತಿ ದಿನ ಬರುವ ಹತ್ತಾರು ಪತ್ರಿಕೆಗಳು, ಪುಸ್ತಕಗಳಿಂದ ಸಾರ್ವಜನಿಕರು ಪ್ರಯೋಜನ ಪಡೆಯುತ್ತಿದ್ದಾರೆ.

ಆದರೆ ಈ ಗ್ರಂಥಾಲಯಕ್ಕೆ ಪದೇಪದೇ ಹತ್ತಾರು ದಿನ ಒಟ್ಟಾಗಿ ಬಾಗಿಲು ಹಾಕಿಡಲಾಗುತ್ತಿದೆ. ಇಲ್ಲಿನ ಗ್ರಂಥ ಪಾಲಕರು ದೀರ್ಘ ರಜೆ ಹೋಗುವಾಗಲೂ ಸಹ ಅವರ ಬದಲಿಗೆ ಬೇರೆಯವರನ್ನು ವ್ಯವಸ್ಥೆ ಮಾಡುತ್ತಿಲ್ಲ. ಬರುವ ಪತ್ರಿಕೆಗಳೆಲ್ಲ ಸಾರ್ವಜನಿಕರ ಉಪಯೋಗಕ್ಕೂ ಇಲ್ಲದೆ, ಕೇವಲ ಸರ್ಕಾರದ ಬೊಕ್ಕಸಕ್ಕೆ (ಜನರ ಜೇಬಿಗೆ) ಮಾತ್ರ ತೂತು ಕೊರೆಯುತ್ತಿವೆ.

ಉದಾಹರಣೆಗೆ ಈ ತಿಂಗಳು ವಿವಿಧ ಪರೀಕ್ಷಾ ಫಲಿತಾಂಶಗಳು, ಶಾಲಾ–ಕಾಲೇಜು–ತರಬೇತಿ ಕೇಂದ್ರಗಳ ಪ್ರವೇಶ ಪ್ರಕಟಣೆಗಳು ಮುಂತಾದ ನಾನಾ ಕಾರಣಕ್ಕೆ ಜನರಿಗೆ ಪತ್ರಿಕೆಗಳ ಉಪಯೋಗ ಬೀಳುವ ಸಮಯ. ಈ ಅವಧಿಯಲ್ಲೇ 20 ದಿನ ಗ್ರಂಥಾಲಯ ಬಾಗಿಲು ಮುಚ್ಚಿದ್ದು ಎಂಥ ವಿಪರ್ಯಾಸ!

(4ನೇ ಪುಟಕ್ಕೆ)

ಕೊಪ್ಪ ಠಾಣೆಯಲ್ಲಿ 'ರೌಡಿ'ಗಳಾದ ಕಾರ್ಮಿಕ ಮುಂದಾಳುಗಳು !

(2ನೇ ಪುಟದಿಂದ)

ಸಬ್‌ಇನ್‌ಸ್ಪೆಕ್ಟರು, ಈ ಇಬ್ಬರ ನಡವಳಿಕೆಯ ವಿರುದ್ಧ ತನಗೆ ಮೊದಲಿನಿಂದಲೂ ತೀವ್ರ ಆಕ್ಷೇಪವಿದ್ದರೂ ಸಹ ಈ ಪ್ರಕರಣದಲ್ಲಿ ಎಸ್ಪಿಯವರಿಗೆ ತಾನೇನೂ ಹೇಳಿದ್ದಿಲ್ಲವೆಂದೂ, ಅವರೇ ಕಡತ ನೋಡಿ ಆದೇಶಿಸಿದ್ದೆಂದೂ. ಶನಿವಾರವೇ ಇವರನ್ನು ಹಿಡಿದು ಜೈಲಿಗೆ ಕಳಿಸಿದ್ದು ಕೂಡ ಕೇವಲ ಆಕಸ್ಮಿಕ, ಪೂರ್ವಯೋಜಿತವಲ್ಲ ಎಂದೂ ಹೇಳುತ್ತಾರೆ. (ಶನಿವಾರ ಸಂಜೆ ಜೈಲಿಗೆ ಕಳಿಸಿ ಬಿಟ್ಟರೆ ಭಾನುವಾರವೂ ಅವರು ಜೈಲಲ್ಲೇ ಇರುವುದು ಅನಿವಾರ್ಯವಷ್ಟೆ?)

• ಆದರೆ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಸುಂದರೇಶ್ ಎಸ್ಪಿಗೆ ನೀಡಿದ ದೂರಿನಲ್ಲಿ, ದುಗ್ಗಪ್ಪ ಅವರು ಈ ಹಿಂದೆ ನಡೆಸಿದ ಕೆಲವು ದೌರ್ಜನ್ಯಗಳ ವಿರುದ್ಧ ಕಾರ್ಮಿಕ ಮುಖಂಡರುಗಳಾದ ಚಿಕ್ಕೇಗೌಡ, ಸಂಜೀವ ಇವರುಗಳು ಪ್ರತಿಭಟಿಸಿದ್ದು, ಠಾಣಾಧಿಕಾರಿ ಕ್ಷಮೆ ಕೇಳಬೇಕಾಗಿ ಬಂದಂಥ ಪ್ರಕರಣಗಳ ಸೇಡು ತೀರಿಸಲೆಂದೇ ಅವರು ಇಂಥ ಪ್ರಕರಣ ಸೃಷ್ಟಿಸಿದ್ದೆಂದು ಆಪಾದಿಸಿದ್ದಾರೆ.

ರಾಮಚಂದ್ರ, ಸಂಜೀವ, ಚಿಕ್ಕೇಗೌಡ ಇವರುಗಳು ಕಳೆದ ಹಲವು ವರ್ಷಗಳಿಂದ ಕೊಪ್ಪ ತಾಲೂಕಿನ ಬಡ ಜನತೆಯ ಹಕ್ಕು ಮತ್ತು ಹಿತಗಳಿಗಾಗಿ ಶ್ರಮಿಸುತ್ತ ಅವರ ಪ್ರೀತಿ ವಿಶ್ವಾಸ ಗಳಿಸಿಕೊಂಡಿದ್ದು, ಇವರುಗಳ ವಿರುದ್ಧ ಕೈಗೊಂಡಿರುವ ಇಂಥ ವ್ಯಕ್ತಿ ಸ್ವಾತಂತ್ರ್ಯ ದಮನದ ಕ್ರಮವನ್ನು ತೀವ್ರವಾಗಿ ಪ್ರತಿಭಟಿಸುವುದಾಗಿ ತಿಳಿಸಿರುವ ಸುಂದರೇಶ್, ಈ ಸುಳ್ಳು ಮೊಕದ್ದಮೆಗಳನ್ನು ಕೂಡಲೇ ಹಿಂತೆಗೆದುಕೊಳ್ಳದಿದ್ದಲ್ಲಿ ಇದರ ವಿರುದ್ಧ ತೀವ್ರ ಪ್ರತಿಭಟನೆಯ ಕ್ರಮ ರೂಪಿಸುವುದಾಗಿ ಸ್ಪಷ್ಟಪಡಿಸಿದ್ದಾರೆ.

ಕೊಪ್ಪದ ಇತಿಹಾಸದಲ್ಲೇ ಈ ಬಗೆಯ ಪ್ರಕರಣಗಳಲ್ಲಿ (107, 108, 109, 110 ಇತ್ಯಾದಿ) ಆರೋಪಿಗಳನ್ನು ಜೈಲಿಗೆ ಕಳಿಸಿರುವುದು ಇದೇ ಮೊಟ್ಟ ಮೊದಲನೆಯದೆನ್ನಲಾಗಿದೆ.

ಇದ್ದೂ ಇಲ್ಲದಂತಾಗಿರುವ ಸಾ|| ಗ್ರಂಥಾಲಯ

(3ನೇ ಪುಟದಿಂದ)

ಹಿಂದೆ ಇಲ್ಲಿ ಇಬ್ಬರು ಗ್ರಂಥಪಾಲಕರಿದ್ದು, ಒಬ್ಬರು ರಜೆ ಹೋದರೂ ಬಾಗಿಲು ಹಾಕುವ ಪರಿಸ್ಥಿತಿ ಇರಲಿಲ್ಲ. ಈಗ ಬಹಳ ಕಾಲದಿಂದ ಒಬ್ಬರೇ ಆಗಿ, ಪದೇ ಪದೇ ಹೀಗೆ ದೀರ್ಘ ಕಾಲದ 'ಬೀಗತನ' ಅನಿವಾರ್ಯವಾಗಿದೆ. ಈ ಬಗ್ಗೆ ಮೇಲ್ಪಟ್ಟವರಿಗೆ ಅನೇಕ ಬಾರಿ ತಿಳಿಸಿದ್ದರೂ ಪ್ರಯೋಜನವಾಗಿಲ್ಲ.

ಇಡೀ ಕೊಪ್ಪ ತಾಲ್ಲೂಕಿಗೆ ಇದೊಂದೇ ವ್ಯವಸ್ಥಿತ ಗ್ರಂಥ ಭಂಡಾರ. ಇಲ್ಲಿಗೆ ವರ್ಷಂಪ್ರತಿ ಹತ್ತು ಸಾವಿರ ರೂಪಾಯಿಗೂ ಹೆಚ್ಚು ಹೊಸ ಪುಸ್ತಕಗಳು ಬರುತ್ತವೆ. ತಾಲ್ಲೂಕಿನಾದ್ಯಂತ ಅಲ್ಲದಿದ್ದರೂ 15-20 ಕಿ.ಮೀ. ದೂರದಿಂದಲೂ ಇಲ್ಲಿಗೆ ಸದಸ್ಯರಾದವರಿದ್ದಾರೆ. ವಾರದ 7 ದಿನವೂ ತೆರೆದಿರಬೇಕಾದ ಈ ಶಾಖೆ 7 ದಿನಕ್ಕೆ ಒಂದು ಬಾರಿ ತೆರೆಯುವುದೇ ದುಸ್ತರ ಎಂದಾದರೆ ಹೇಗೆ? ಕೆಲವೊಮ್ಮೆ ಎಷ್ಟು ದಿನ ಬಾಗಿಲು ಮುಚ್ಚಿರುತ್ತೆ, ಯಾವಾಗ ತೆರೆಯುತ್ತೆ, ರಜ ಹಾಕಲಾಗಿದೆಯೋ ಅಥವಾ ಗ್ರಂಥ ಪಾಲಕರು ಇಲ್ಲೇ ಕಾಫಿಗೋ ಎಲ್ಲಿಗಾದರೂ ಹೋಗಿದ್ದಾರೋ—ಎಂಬುದು ಗೊತ್ತಾಗದೆ, ದೂರದೂರದಿಂದ ಪುಸ್ತಕಗಳನ್ನು ಬದಲಿಸಿಕೊಳ್ಳಲು ಬರುವವರಿಗಂತೂ ಹೇಳತೀರದಷ್ಟು ತೊಂದರೆಯಾಗುತ್ತಿದೆ.

ಇನ್ನು, ಸುತ್ತಮುತ್ತ ಶೇ. 80ರಷ್ಟು ಜನ ರೈತರಿದ್ದು, ಇಲ್ಲಿ ಶೇ. 8ರಷ್ಟು ಕೂಡ ಕೃಷಿಗೆ ಸಂಬಂಧಿಸಿದ ಪುಸ್ತಕಗಳಿಲ್ಲದಿರುವುದು, ಸ್ಥಳೀಯ ಪತ್ರಿಕೆಗಳನ್ನು ಇಲ್ಲಿಗೆ ತರಿಸದಿರುವುದು — ಇವು ಕೂಡ ಇಲ್ಲಿನ ಕೊರತೆಗಳು.

ಜಿಲ್ಲಾ ಗ್ರಂಥ ಪಾಲಕರಾಗಲಿ, ಜಿಲ್ಲೆಯ ಇನ್ಯಾರಾದರೂ ಸಂಬಂಧಪಟ್ಟ ಅಧಿಕಾರಸ್ಥರಾಗಲಿ ಈ ಬಗ್ಗೆ ಗಮನಹರಿಸದಿದ್ದರೆ, ಲಕ್ಷಾಂತರ ರೂ.ಗಳ ಪುಸ್ತಕ, ಕಟ್ಟಡ, ಸಂಬಳ-ಸಾರಿಗೆಗಳೆಲ್ಲ ವ್ಯರ್ಥವೇ ಸರಿ

ಗ್ರಂಥಾಲಯದ ಸದಸ್ಯರು,
ಕೊಪ್ಪ.
(10 ಜನರ ಸಹಿ ಇದೆ.)

ಜಿ. ಪ. ಇಂಜಿನಿಯರ್ ಉದ್ಧಟತನ

(3ನೇ ಪುಟದಿಂದ)

ಪೂರ್ತಿ 6 ಕಿ.ಮೀ. ಆಗಿರುವಂತೆ ದಾಖಲಿಸಿ ಬಿಲ್ ಪಡೆದಾಗಿದೆ.)

ಆದರೆ ಈ ರಸ್ತೆಯ ಎರಡೂ ಕಡೆ ಚರಂಡಿ ಮಾಡಿಲ್ಲ. ರಸ್ತೆ ಕಡಿಯುತ್ತಿದ್ದಾಗ ಈ ಇಂಜಿನಿಯರ್‌ರನ್ನು ವಿಚಾರಿಸಿದ್ದಕ್ಕೆ, ಮಳೆ ಬಂದ ಮೇಲೆ ಚರಂಡಿ ಮಾಡುವ ಭರವಸೆ ಕೊಟ್ಟಿದ್ದರು. ಆದರೆ ಇನ್ನೂ ಚರಂಡಿಯಾಗಿಲ್ಲ. ಗುಡ್ಡದ ಮಳೆಯ ನೀರೆಲ್ಲ ರಸ್ತೆಯನ್ನು ಕೊಚ್ಚುತ್ತಿದೆ.

3) 29.4.90ರ 'ಮುಂಜಾವು'ನಲ್ಲಿ ಪ್ರಕಟವಾದ "ಕಿಗ್ಗ ಮಂಡಲಕ್ಕೆ 85 ಸಾವಿರ ರೂ. ದ್ವಿಮುಖ ನಷ್ಟ" ಎಂಬ ವರದಿಯ ವಿಚಾರವನ್ನು ಮಂಡಲ ಕಾರ್ಯದರ್ಶಿ ಮತ್ತು ಜಿ.ಪ. ಸದಸ್ಯರು ಸತ್ಯವೆಂದು ತಿಳಿಸಿದ್ದು, ಹಿಂದಕ್ಕೆ ಹೋದ 28 ಸಾವಿರ ರೂ. ಗ್ರಾಂಟನ್ನು ವಾಪಸು ತರಿಸಲು ಏರ್ಪಾಡು ಮಾಡಿದ್ದೇವೆ ಎಂದಿದ್ದರು. ಆ ಹಣ ವಾಪಸು ಹೋಗುವುದಕ್ಕೂ ಈ ನಿರ್ಲಜ್ಜ ಇಂಜಿನಿಯರರ ಕರ್ತವ್ಯ ಲೋಪವೇ ಕಾರಣವಾಗಿತ್ತು. ಆ ಹಣ ಜಿ.ಪ. ಸದಸ್ಯರ ಮಾತಿನಂತೆ ಮಂಡಲಕ್ಕೆ ವಾಪಸು ಬಂತೇ ಇಲ್ಲವೆ ಎಂಬುದನ್ನು ಸಂಬಂಧಿಸಿದವರು ಪತ್ರಿಕೆಯ ಮೂಲಕ ಸಾರ್ವಜನಿಕರಿಗೆ ತಿಳಿಸಬೇಕು.

ಮೇಲಧಿಕಾರಿಗಳು ಯಾರಾದರೂ ದಕ್ಷತೆ, ಕಳಕಳಿ ಉಳ್ಳವರು ಇದ್ದರೆ ಈ ಉದ್ಧಟ ಇಂಜಿನಿಯರ್‌ರನ್ನು ಅಮಾನತಿನಲ್ಲಿಟ್ಟು, ಅವರ ಬಗ್ಗೆ ಕೂಡಲೇ ತನಿಖೆ ನಡೆಸಿ ಉಗ್ರ ಕ್ರಮ ಕೈಗೊಳ್ಳಬೇಕು. ಅಂತೆಯೇ, ತುರ್ತಾಗಿ ಈ ಸೇತುವೆಗೆ ಪುನಃ ಗಟ್ಟಿಮುಟ್ಟಾದ ರಕ್ಷಣೆ ಗೋಡೆಯನ್ನೂ, ಮೇಲೆ ತಿಳಿಸಿದ ರಸ್ತೆಯ ಎರಡೂ ಬದಿ ನೀರು ಕಾಲುವೆಗಳನ್ನೂ ನಿರ್ಮಿಸಬೇಕಾಗಿ ಕೋರುತ್ತೇನೆ.

ಗ್ರಾಮಸ್ಥರ ಪರವಾಗಿ,
ಎಸ್.ಸಿ ಭಾಸ್ಕರ ರಾವ್,
ಸಿರಿಮನೆ, ಶೃಂಗೇರಿ ತಾ||

ಎಲ್ಐಸಿ ಪ್ರೀಮಿಯಂ ಕಟ್ಟುವ ಸಮಸ್ಯೆ

ಕೊಪ್ಪ : ಜೀವ ವಿಮಾ ಪಾಲಿಸಿಗಳ ಪ್ರೀಮಿಯಂ ಹಣವನ್ನು ಈವರೆಗೆ ಇಲ್ಲಿನ ಕರ್ನಾಟಕ ಬ್ಯಾಂಕ್‌ನಲ್ಲಿ ಕಟ್ಟುವ ಸೌಕರ್ಯವಿದ್ದು, ಈಗ ನಿಗಮದ ಶಾಖೆಯಲ್ಲೇ ಕಟ್ಟಬೇಕಾಗಿದೆ. ವ್ಯವಹಾರಸ್ಥರಿಗೆ ಇದರಿಂದ ಅಷ್ಟರಮಟ್ಟಿಗೆ ಅನಾನುಕೂಲವಾಗಿದ್ದು, ಮೊದಲಿನ ವ್ಯವಸ್ಥೆಯನ್ನೇ ಮುಂದುವರಿಸುವಂತೆ ಪಾಲಿಸಿದಾರರು ಕೋರಿದ್ದಾರೆ.

ಹಾಗೆಯೇ, ಕೆಲವು ಪಾಲಿಸಿಗಳು ಇನ್ನೂ ವರ್ಗಾವಣೆ ಆಗಿಲ್ಲದೆ ಅಂಥ ಪ್ರೀಮಿಯಂಗಳನ್ನು ಚಿಕ್ಕಮಗಳೂರಿಗೇ ಕಳಿಸುವಂತೆ ಕಛೇರಿಯಿಂದ ತಿಳಿಸಲಾಗುತ್ತಿದೆ. ಕೊಪ್ಪದ ಎಲ್ಲ ಪಾಲಿಸಿಗಳನ್ನೂ ಶೀಘ್ರವಾಗಿ ಇಲ್ಲಿಗೇ ತರಿಸಿಕೊಳ್ಳಬೇಕು ಎಂದೂ ಆಗ್ರಹಿಸಿದ್ದಾರೆ.

ಅಡಿಕೆ ಧಾರಣೆ

ಶಿವಮೊಗ್ಗ : 22-6-1990
ಸರಕು : 4010-4589
ಬೆಟ್ಟೆ : 3132-3875
ಗೊರಬಲು : 1812-2572
ಸಾಗರ 22-6-1990
ಇಡಿ : 2689-3836
ಆಪಿ : 4401-4699
ಚಾಲಿ : 2999-3122
ಸಿಪ್ಪೆ ಗೋಟು : 1399-1637

ನೂತನ ಸರ್ಕಲ್ ಇನ್ಸ್‌ಪೆಕ್ಟರ್ ಅಧಿಕಾರ ಸ್ವೀಕಾರ

ಕೊಪ್ಪ : ಇಲ್ಲಿನ ನೂತನ ಸರ್ಕಲ್ ಇನ್ಸ್‌ಪೆಕ್ಟರಾಗಿ ಎಸ್. ಎಫ್. ಪಾಶಾ ಅವರು ಜೂನ್ 12 ರಂದು ಅಧಿಕಾರ ವಹಿಸಿಕೊಂಡಿದ್ದಾರೆ. ಕೇಶವಾನಂದ ಅವರು ಸಿರ್ಸಿಗೆ ವರ್ಗವಾಗಿದ್ದಾರೆ.

ತಿದ್ದುಪಡಿ

ತಾ|| 17-6-90 ರ 'ಮುಂಜಾವು'ನಲ್ಲಿ ಪ್ರಕಟವಾದ ವಿಷನ್ ಆಪ್ಟಿಕಲ್ಸ್, ಕೊಪ್ಪ ಇವರ ಜಾಹೀರಾತಿನಲ್ಲಿ ರಜಾ ದಿನ : ಗುರುವಾರ ಎಂದು ತಿದ್ದಿಕೊಳ್ಳಬೇಕಾಗಿ ವಿನಂತಿ . —ಸಂ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್. ಅಚ್ಚು : ದೀನಪಟಿಗೆ ಅಚ್ಚುಕೂಟ, ಕೊಪ್ಪ